154 ನೆ.ಲಿ.ಪ್ರ.-330-(24)
4RK
2908

**ವಿಧಾನ ಪರಿಷತ್ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ ಇವರ ನಿಯಮ 330 ರಡಿಯಲ್ಲಿನ ಗಮನ ಸೆಳೆಯುವ ಸೂಚನೆಗೆ ಮಾಹಿತಿ.**

**ವಿಷಯ** :ಕೃಷ್ಣಾ ಮೇಲ್ದಂಡೆ ಯೋಜನೆಯು ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಲ್ಲೊಂದಾಗಿದ್ದು, ಸದರಿ ಯೋಜನೆಗೆ ತಮ್ಮ ಆಸ್ತಿ–ಪಾಸ್ತಿಗಳನ್ನು ಕಳೆದುಕೊಂಡಿರುವ ಸಂತ್ರಸ್ಥರಿಗಾಗಿ ನಿರ್ಮಿಸಲಾಗುತ್ತಿರುವ ಪುನರ್ವಸತಿ ಮತ್ತು ಪುನರ್‌ನಿರ್ಮಾಣ ಕಾಮಗಾರಿಗಳ ವಿಳಂಬದಿಂದಾಗಿ ತಮ್ಮ ಮನೆ, ಮಠ, ಆಸ್ತಿ ಅಂತಸ್ತುಗಳನ್ನು ಕಳೆದುಕೊಂಡಿರುವ ಸಂತ್ರಸ್ಥ ಕುಟುಂಬಗಳ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಸರ್ಕಾರವು ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಕುರಿತು.

*****

**ಕೃಷ್ಣಾ ಮೇಲ್ದಂಡೆಯೋಜನೆ ಹಂತ–1 & 2:**

- ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 ಮತ್ತು 2ರಡಿಯಲ್ಲಿ ಮುಳುಗಡೆ ಬಾಧಿತವಾದ 176 ಗ್ರಾಮಗಳಿಗೆ ಪರ್ಯಾಯವಾಗಿ ರೂ.881.18 ಕೋಟಿ ಮೊತ್ತದಲ್ಲಿ ಅಗತ್ಯ ಮೂಲಭೂತ ಸೌಕರ್ಯ ಒದಗಿಸಿ 136 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿರುತ್ತದೆ. ವಿವರಗಳು ಈ ಕೆಳಗಿನಂತಿವೆ.

| ವಿವರ | ನಾರಾಯಣಪೂರ ಜಲಾಶಯ | ಆಲಮಟ್ಟಿ ಜಲಾಶಯ | ಒಟ್ಟು |
|---|---|---|---|
| ಮುಳುಗಡೆ ಬಾಧಿತವಾದ ಗ್ರಾಮಗಳ ಸಂಖ್ಯೆ | 40 | 136 | 176 |
| ನಿರ್ಮಿಸಿದ ಪುನರ್ವಸತಿ ಕೇಂದ್ರಗಳ ಸಂಖ್ಯೆ | 34 | 102 | 136 |

- ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–1 ರಡಿ ನಿರ್ಮಾಣವಾದ 34 ಪುನರ್ವಸತಿ ಕೇಂದ್ರಗಳ ಪೈಕಿ 30 ಪುನರ್ವಸತಿ ಕೇಂದ್ರಗಳನ್ನು 1991 ರಿಂದ 2014 ರವರೆಗೆ ಮುಂದಿನ ನಿರ್ವಹಣೆಗಾಗಿ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆ.
- ಉಳಿದ 106 ಪುನರ್ವಸತಿ ಕೇಂದ್ರಗಳನ್ನು ಬಾಕಿ/ಮುಂದುವರೆದ ಕಾಮಗಾರಿಗಳಿಗಾಗಿ ಅವಶ್ಯವಿರುವರೂ. 191.50 ಕೋಟಿ ಒಂದಾವರ್ತಿ ಅನುದಾನದೊಂದಿಗೆ ಸಂಬಂಧಿತ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲು ಆದೇಶವಾಗಿದ್ದು, ಅದರಂತೆ, 104 ಪುನರ್ವಸತಿ ಕೇಂದ್ರಗಳನ್ನು ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿರುತ್ತದೆ. ಇನ್ನುಳಿದ 2 (ಕಲಾದಗಿ& ಯಡಹಳ್ಳಿ (ಜಿ)) ಪುನರ್‌ವಸತಿ ಕೇಂದ್ರಗಳನ್ನು ಹಸ್ತಾಂತರಿಸುವ ಪ್ರಕ್ರಿಯೆ ಜಾರಿಯಲ್ಲಿದೆ.
- ಈ ಪೈಕಿ ಇಲ್ಲಿಯವರೆಗೆ ರೂ.164.16 ಕೋಟಿಗಳ ಅಭಿವೃದ್ಧಿ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗ ಹಾಗೂ ಪಟ್ಟಣ ಪಂಚಾಯತ್ ಇಲಾಖೆಯಿಂದ ಕೈಗೊಂಡಿದ್ದು, ವೆಚ್ಚ ಭರಿಸಲಾಗಿದೆ.

**ಪುನರ್‌ವಸತಿ ಮತ್ತು ಪುನರ್ ನಿರ್ಮಾಣದಡಿ ಸಂತ್ರಸ್ಥರ ಕುಟುಂಬಗಳ ಜೀವನಮಟ್ಟ ಸುಧಾರಿಸಲು ಕೈಗೊಂಡಿರುವ ಕ್ರಮಗಳು:**

- ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾದ ಗ್ರಾಮಗಳಲ್ಲಿನ ಭಾದಿತ ಸಂತ್ರಸ್ಥರಿಗೆ ಆಯಾ ಪುನರ್‌ವಸತಿ ಕೇಂದ್ರಗಳಲ್ಲಿ ಎನ್.ಜಿ.ಓ. ಸಂಸ್ಥೆಯವರಿಂದ ಟೈಲರಿಂಗ್, ಕಸೂತಿ, ಬ್ಯಾಗ್ ತಯಾರಿಕೆ, ಬಡಿಗೆ, ಕಮ್ಮಾರ, ಕುಂಬಾರ ಹಾಗೂ ಇನ್ನಿತರ ಕುಶಲಕರ್ಮಿ ಕೆಲಸ ತರಬೇತಿ ನೀಡಲಾಗಿದೆ. ಹಾಗೂ ಉತ್ಪನ್ನ ಹೆಚ್ಚುವರಿ ಯೋಜನೆಯಡಿ (ಐ.ಜಿ.ಎಸ್.) (Income Generation Scheme) ಎಮ್ಮೆ, ಆಡು, ಕುರಿ ಸಾಕಾಣಿಕೆಗಾಗಿ ರೂ.20,000/– ಗಳ ಸಹಾಯಧನ ನೀಡಲಾಗಿದೆ.
- ಬಾಧಿತ ಕುಟುಂಬಗಳ ಸಂತ್ರಸ್ತರಿಗೆ ಸಂಬಂದಿಸಿದಂತೆ, ನಿರಾಶ್ರಿತರ ಯೋಜನೆ ಅಡಿಯಲ್ಲಿ ಸರ್ಕಾರದ ಹುದ್ದೆಗಳ ನೇಮಕಾತಿಯಲ್ಲಿ ಶೇಕಡಾ. 5 ರಷ್ಟು ಮೀಸಲಾತಿ ಕಲ್ಪಿಸಲಾಗಿದ್ದು ಪ್ರಸ್ತುತ ಚಾಲ್ತಿಯಲ್ಲಿದೆ.
- ಸರ್ಕಾರದ ಆದೇಶ ಸಂಖ್ಯೆ:RD 21 REH 94 (P) Bangalore Dated. 15-05-1995ರ ಪ್ರಕಾರ ಅರ್ಹ ಸಂತ್ರಸ್ಥರಿಗೆ ಅವರು ಹೊಂದಿದ ಭೂ ಹಿಡುವಳಿ ಆಧಾರದ ಮೇಲೆ ನಿವೇಶನವನ್ನು ಮುಖ್ಯ ಸಂತ್ರಸ್ಥರಿಗೆ ಹಂಚಿಕೆ ಮಾಡಲಾಗಿದೆ.

- ಇದೂ ಅಲ್ಲದೇ ಇಬ್ಬರು ಅರ್ಹ ವಯಸ್ಕ ಗಂಡು ಮಕ್ಕಳಿಗೆ ಮತ್ತು 35 ವರ್ಷ ಮೀರಿದ ಅವಿವಾಹಿತ ಮಹಿಳೆಗೆ, ಸಹೋದರ ಸಂತ್ರಸ್ಥರಿಗೆ ಪುನರ್‌ವಸತಿ ಸೌಲಭ್ಯ ಕಲ್ಪಿಸಲಾಗಿದೆ.

- ಸರ್ಕಾರದ ಆದೇಶ ಸಂಖ್ಯೆ:RD 21 REH 94 (P) Bangalore Dated.15.05.1995 ರ ಪ್ರಕಾರ ಅರ್ಹ ಸಂತ್ರಸ್ಥರಿಗೆ ಮನೆ ಕಟ್ಟಡ ಅನುಕಂಪ ಪರಿಹಾರ ಅನುದಾನ(House Construction Grant) ರೂ.22,000/- & ಜೀವನಾಂಶ ಭತ್ಯೆ(Subsistence Allowance) ರೂ.2,800/- ನೀಡಲಾಗುತ್ತಿದೆ.

- ಸಂತ್ರಸ್ಥರಿಗೆ ಜಮೀನು ಖರೀದಿಗೆ ಅನುಕಂಪ ಪರಿಹಾರ ಮೊತ್ತವನ್ನು (Land Purchase Grant) ನೀಡಲಾಗುತ್ತಿದೆ.

- ಪುನರ್‌ವಸತಿ ಕೇಂದ್ರಗಳಲ್ಲಿ ಸಂತ್ರಸ್ಥರಿಗೆ ಶಾಶ್ವತವಾಗಿ ನೆಲೆಸುವ ಸಲುವಾಗಿ ರಸ್ತೆ, ನೀರು, ಸಾರ್ವಜನಿಕ ಸರ್ಕಾರಿ ಕಟ್ಟಡಗಳು, ತಿಪ್ಪೆಗುಂಡಿ, ಬಣವೆ ಹಾಗೂ ಸ್ಮಶಾನ ಜಾಗೆ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

**ಕೃಷ್ಣಾ ಮೇಲ್ದಂಡೆಯೋಜನೆ ಹಂತ-3**

- ಆಲಮಟ್ಟಿ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ 20 ಗ್ರಾಮಗಳಿಗೆ ಎದುರಾಗಿ 24 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಿದ್ದು, ಈ ಪೈಕಿ 10 ಪುನರ್ವಸತಿ ಕೇಂದ್ರಗಳ ಲೇಔಟ್ ನಕ್ಷೆಗಳಿಗೆ ಅನುಮೋದನೆ ಪಡೆದು ಹೊಸ ಭೂಸ್ವಾಧೀನದ ನಿಯಮಾವಳಿಯಂತೆ ನಿರ್ಮಾಣ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಇನ್ನುಳಿದ [redacted] 13 ಪುನರ್ವಸತಿ ಕೇಂದ್ರಗಳಿಗೆ ಜಮೀನುಗಳ ಭೂಸ್ವಾಧೀನದ ವಿವಿಧ ಹಂತದಲ್ಲಿದೆ. ಪ್ರಸ್ತುತ 1 ಗದ್ದನಕೇರಿ ಗ್ರಾಮದ ಸರ್ವೆಕಾರ್ಯ ತಡೆಹಿಡಿಯಲಾಗಿದೆ.

- ಪ್ರಸ್ತುತ, 10 ಪುನರ್ವಸತಿ ಕೇಂದ್ರಗಳಲ್ಲಿ ಹೊಸ ಭೂಸ್ವಾಧೀನದ ನಿಯಮಾವಳಿಯಂತೆ ಮೂಲಭೂತ ಸೌಲಭ್ಯ ಒದಗಿಸಲು ರಸ್ತೆ, ಬದಿಚರಂಡಿ, ಸಾರ್ವಜನಿಕ ಕಟ್ಟಡಗಳು, ಕಿರುನೀರು ಪೂರೈಕೆ ಹಾಗೂ ಇತರೆ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈವರೆಗೆರೂ:130.00 ಕೋಟಿವೆಚ್ಚ ಮಾಡಲಾಗಿದೆ. ವಿದ್ಯುದ್ದೀಕರಣ ಕಾಮಗಾರಿಗಾಗಿ ಹೆಸ್ಕಾಂ ಇಲಾಖೆಯಿಂದ ಅಂದಾಜು ಪತ್ರಿಕೆ ಪಡೆದು ಟೆಂಡರ್ ಆಹ್ವಾನಿಸಲಾಗುವುದು.
- ಮುಂದುವರೆದು, ಅಂಕಲಗಿ, ಉದಗಟ್ಟಿ, ಕುಂದರಗಿ ಮತ್ತು ಬಾವಲತ್ತಿ ಪುನರ್ವಸತಿ ಕೇಂದ್ರಗಳಲ್ಲಿ ಒಟ್ಟು ರೂ:190.00 ಕೋಟಿಗಳ ಮೊತ್ತದ 88 ಮುಂದುವರೆದ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿಗಳಿದ್ದು, ಅವುಗಳ ಪೈಕಿ ಅಂಕಲಗಿ ಹಾಗೂ ಉದಗಟ್ಟಿ ಪುನರ್ವಸತಿ ಕೇಂದ್ರಗಳಲ್ಲಿ ಲೇಔಟರಚನೆ, ರಸ್ತೆ, ಬದಿಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಕುಂದರಗಿ ಹಾಗೂ ಬಾವಲತ್ತಿ ಪುನರ್ವಸತಿ ಕೇಂದ್ರಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿರುತ್ತದೆ.

- ಕಂದಾಯ ಇಲಾಖೆಯ ಆದೇಶ ದಿನಾಂಕ:25.01.2023 ರನ್ವಯ ಕೃ.ಮೇ.ಯೋ. ಹಂತ-3 ರಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಒಣ ಭೂಮಿಗೆ ರೂ.20 ಲಕ್ಷ ಪ್ರತಿಎಕರೆ ಹಾಗೂ ನೀರಾವರಿ / ಬಾಗಾಯತ್ ಜಮೀನುಗಳಿಗೆ ರೂ.24.00 ಲಕ್ಷ ಪ್ರತಿ ಎಕರೆರಂತೆ ನಿಗದಿಪಡಿಸಲಾದ Consent Award ರನ್ವಯ ಹಾಗೂ ಕಟ್ಟಡಗಳಿಗೆ (ಕೃಮೇಯೋ ಅಡಿ ಮುಳುಗಡೆಯಾಗಲಿರುವ ಗ್ರಾಮಗಳ ಕಟ್ಟಡಗಳು) ಸಂಬಂಧಿಸಿದಂತೆ, ಒಪ್ಪಿಗೆ ಐತೀರ್ಪಿಗೆ ಒಳಪಡುವ ಕಟ್ಟಡಗಳನ್ನು ಲೋಕೋಪಯೋಗಿ ಇಲಾಖೆಯ ದರಪಟ್ಟಿಗಳಂತೆ ನಿರ್ಧರಿಸಿರುವ ಸವಕಳಿ ರಹಿತ ಮೌಲ್ಯಕ್ಕೆ ಶೇ.20% ರಷ್ಟು ಹೆಚ್ಚಿಸಿ (Over and Above) ಒಪ್ಪಂದದ ಐತೀರ್ಪಿನನ್ವಯ ಪರಿಹಾರ ನೀಡಲು ಕ್ರಮ ವಹಿಸಲಾಗುತ್ತಿದೆ.

**ಹೊಸ ಭೂಸ್ವಾಧೀನ ಕಾಯ್ದೆ ಅಧಿನಿಯಮ 2013ರ 2ನೇ ಅನುಸೂಚಿ(Second Schedule)ಪ್ರಕಾರ ಸ್ಥಳಾಂತರಗೊಳ್ಳುವ ಕುಟುಂಬಗಳಿಗೆ ನೀಡಲಾಗುವ ಸೌಲಭ್ಯಗಳ ವಿವರಗಳು:**

- ಸ್ಥಳಾಂತರಗೊಳ್ಳುವ ಪ್ರತಿಯೊಂದು ಕುಟುಂಬಕ್ಕೆ ಮನೆ ನಿರ್ಮಾಣಕ್ಕಾಗಿ ರೂ.1.50 ಲಕ್ಷಗಳ ಆರ್ಥಿಕ ಸಹಾಯವನ್ನು ಒದಗಿಸಲಾಗುತ್ತದೆ.
- ಪ್ರತಿಯೊಂದು ಕುಟುಂಬಕ್ಕೆ ಒಂದು ವರ್ಷದ ಅವಧಿಗಾಗಿ ಪ್ರತಿ ತಿಂಗಳು ರೂ.3000/-ಗಳಿಗೆ ಸಮನಾದ ಮಾಸಿಕ ಜೀವನ ನಿರ್ವಹಣೆ ಭತ್ಯೆಯನ್ನು ನೀಡಲಾಗುತ್ತದೆ.

- ಪ್ರತಿಯೊಂದು ಕುಟುಂಬಕ್ಕೆ ಕಟ್ಟಡ ಸಾಮಗ್ರಿಗಳು, ಸ್ವಂತ ಸಾಮಾನುಗಳನ್ನು ಸಾಗಿಸುವುದಕ್ಕಾಗಿ ರೂ.50,000/- ವಾಹನ ಸೌಕರ್ಯದ ಖರ್ಚೆಂದು ನೀಡಲಾಗುತ್ತದೆ.
- ಪ್ರತಿಯೊಂದು ಬಾಧಿತ ಕುಟುಂಬಕ್ಕೆ ರೂ.50,000/- ಒಂದು ಬಾರಿಯ ಪುನರ್ ವ್ಯವಸ್ಥೆಯ ಭತ್ಯೆಯನ್ನು ನೀಡಲಾಗುತ್ತದೆ.
- ಗ್ರಾಮಗಳಿಗೆ ಭೂ ಅರ್ಜನೆಯಲ್ಲಿ ಯೋಗ್ಯ ಪರಿಹಾರ ಪಾರದರ್ಶಕತೆ ಪುನರ್‌ವಸತಿ, ಪುನರ್‌ವ್ಯವಸ್ಥೆಗೆ ಅಧಿಕಾರ ಅಧಿನಿಯಮ 2013ರ 3ನೇ ಅನುಸೂಚಿ (Third Schedule) ಪ್ರಕಾರ ಅತ್ಯಾವಶ್ಯಕ ಮತ್ತು ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-1&2 ರಡಿ ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡಿರುವ ಸಂತ್ರಸ್ಥರಿಗಾಗಿ ಪುನರ್‌ವಸತಿ & ಪುನರ್‌ನಿರ್ಮಾಣದ ನಿಯಾಮಾವಳಿಯನ್ವಯ ಕಾಲಕಾಲಕ್ಕೆ ವಿಳಂಬಕ್ಕೆ ಆಸ್ಪದ ನೀಡದೇ ಅಗತ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಂಡು ಮುಂದಿನ ನಿರ್ವಹಣೆಗಾಗಿ ಆಯಾ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಿದ್ದು, ಸಂತ್ರಸ್ಥ ಕುಟುಂಬಗಳ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿಅಗತ್ಯ ಕ್ರಮಗಳನ್ನು ತೆಗೆದುಕೊಂಡಿರುತ್ತದೆ. ಮುಂದುವರೆದು ಹಂತ-3 ರಡಿ ಮುಳುಗಡೆಯಿಂದ ಬಾದಿತಗೊಳಗಾಗುವ ಗ್ರಾಮಗಳಿಗೆ ಪುನರ್‌ವಸತಿ& ಪುನರ್‌ನಿರ್ಮಾಣದ ನಿಯಾಮಾವಳಿಯನ್ವಯ ಕಾಲಕಾಲಕ್ಕೆ ವಿಳಂಬಕ್ಕೆ ಆಸ್ಪದ ನೀಡದೇಅಗತ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಹಾಗೂ ಹೊಸ ಭೂಸ್ವಾಧೀನ ಕಾಯ್ದೆ ಅಧಿನಿಯಮ 2013ರ 2ನೇ ಅನುಸೂಚಿ (Second Schedule)ಪ್ರಕಾರ ಸ್ಥಳಾಂತರಗೊಳ್ಳುವ ಕುಟುಂಬಗಳಿಗೆ ಸೌಲಭ್ಯಗಳನ್ನು ನೀಡಲು ಕ್ರಮ ಜರುಗಿಸಲಾಗುವುದು.

ಸಂಖ್ಯೆ:ಜಸಂಇ 53 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು